

بسم اللهِ الرّحمٰن الرّحيم

# ಹಝ್ರತ್ ಉಸ್ಮಾನ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–04–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಅವರ ಸ್ಥಾನ ಏನಾಗಿತ್ತು ಎಂಬುದರ ಕುರಿತು ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ನಾವು ಜನರಲ್ಲಿ ಒಬ್ಬರನ್ನು ಮತ್ತೊಬ್ಬರಿಗಿಂತ ಉತ್ತಮರೆಂದು ಭಾವಿಸುತ್ತಿದ್ದೆವು. ಹಝ್ರತ್ ಅಬೂಬಕರ್(ರ) ಎಲ್ಲರಿಗಿಂತ ಉತ್ತಮರು, ಅನಂತರ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅನಂತರ ಉಸ್ಮಾನ್ ಬಿನ್ ಅಫ್ಫಾನ್(ರ) ಎಂದು ತಿಳಿದಿದ್ದೆವು. ಇನ್ನೊಂದು ವರದಿಯಲ್ಲಿ ಮುಹಮ್ಮದ್ ಬಿನ್ ಹನ್‌ಫಿಯ ತನ್ನ ತಂದೆಯಾದ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಮುಸ್ಲಿಮರಲ್ಲಿ ಶ್ರೇಷ್ಠ ಜನರ ಬಗ್ಗೆ ಕೇಳಿದರು. ಆಗ ಹಝ್ರತ್ ಅಲಿ(ರ) ಅನುಕ್ರಮವಾಗಿ ಮೇಲಿನಂತೆಯೇ ಹೇಳಿದ್ದರು. ಹಝ್ರತ್ ಉಸ್ಮಾನ್(ರ)ರ ನಂತರ ನೀವು ಎಲ್ಲರಿಗಿಂತ ಶ್ರೇಷ್ಠರಲ್ಲವೇ ಎಂದು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಕೇಳಲಾದಾಗ 'ನಾನು ಮುಸ್ಲಿಮರಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಾಗಿರುವೆನು' ಎಂದು ಅವರು ಹೇಳಿದರು.

ಹಝ್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಹಝ್ರತ್ ಉಸ್ಮಾನ್(ರ)ರ ಸ್ಥಾನ ಏನಾಗಿತ್ತು ಎಂಬುದರ ಅಂದಾಜು ಈ ಕೆಳಗಿನ ಘಟನೆಯಿಂದ ಲಭಿಸುತ್ತದೆ. ಒಂದು ಸಲ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಒಬ್ಬ ವ್ಯಕ್ತಿಯ ಜನಾಝುವನ್ನು ತರಲಾಯಿತು. ಆದರೆ ಹಝ್ರತ್ ಪೈಗಂಬರ್(ಸ) ಅವರ ಜನಾಝು ನಮಾಝ್ ನಿರ್ವಹಿಸಲಿಲ್ಲ. ಒಬ್ಬ ವ್ಯಕ್ತಿ ಹೇಳಿದರು: ಯಾ ರಸೂಲಲ್ಲಾಹ್, ನೀವು ಯಾರದಾದರೂ ಜನಾಝು ನಮಾಝುನ್ನು ನಿರ್ವಹಿಸದೇ ಇರುವುದಾಗಿ ನಾವು ಇದಕ್ಕೆ ಮುಂಚೆ ಎಂದೂ ನೋಡಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ವ್ಯಕ್ತಿ ಉಸ್ಮಾನ್‌ರೊಂದಿಗೆ ಹಗೆ ಇರಿಸುತ್ತಿದ್ದರು. ಆದ್ದರಿಂದ ಅಲ್ಲಾಹನು ಸಹ ಆತನ ಶತ್ರುವಾಗಿರುವನು.

ಹಝ್ರತ್ ಉಸ್ಮಾನ್(ರ)ರ ನ್ಯಾಯ ಪಾಲನೆಯ ಸ್ಥಿತಿ ಏನಾಗಿತ್ತೆಂದರೆ, ಒಂದು ಸಲ ಅವರ ಸಹೋದರನಾದ ವಲೀದ್‌ನ ಕುರಿತು ದೂರು ಲಭಿಸಿದಾಗ, ಅವರು ಅವನಿಗೆ ಶಿಕ್ಷೆ ನೀಡಿದರು. ನಿಕಟ ಸಂಬಂಧವೆಂಬುದನ್ನು ಅವರು ಪರಿಗಣಿಸಲಿಲ್ಲ. ಬದಲಾಗಿ ನಿಕಟ ಸಂಬಂಧದ ಕಾರಣ ಇಮ್ಮಡಿ ಶಿಕ್ಷೆಯನ್ನು ಕೊಟ್ಟರು. ನಲ್ವತ್ತು ಚಾವಟಿ ಏಟಿಗೆ ಬದಲಾಗಿ ಎಂಬತ್ತು ಚಾವಟಿಯೇಟು ಕೊಡಿಸಿದರು.

ಹಝ್ರತ್ ಉಸ್ಮಾನ್ ಸ್ವತಂತ್ರಗೊಳಿಸಿದ ಗುಲಾಮರಾದ ಹಮ್‌ರಾನ್ ವರದಿ ಮಾಡುತ್ತಾರೆ: ಒಂದು ಸಲ ಅವರು ಒಂದು ಪಾತ್ರೆಯಲ್ಲಿ ನೀರನ್ನು ತರಿಸಿದರು. ಉತ್ತಮ ರೀತಿಯಲ್ಲಿ ವುಝು ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಹೇಳಿದರು: ಯಾವನು ನಾನು ವುಝು ಮಾಡಿದ ರೀತಿಯಲ್ಲಿ ವುಝು ಮಾಡಿಕೊಂಡು ಎರಡು ರಕಅತ್ ನಮಾಝ್ ನಿರ್ವಹಿಸುವಾಗ ಬೇರೆ ಆಲೋಚನೆಗಳು ಬರದಂತೆ ನೋಡಿಕೊಳ್ಳುತ್ತಾನೋ ಅವನಿಂದ ಅದಕ್ಕಿಂತ ಮುಂಚೆ ಆದ ಎಲ್ಲ ಪಾಪಗಳನ್ನು ಅಲ್ಲಾಹನು ಕ್ಷಮಿಸುವನು.

ಜುಮಾ ದಿವಸ ಎರಡನೇ ಅಧಾನಿನ ವರ್ಧನೆ ಸಹ ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ಉಂಟಾಗಿತ್ತು. ಅದಕ್ಕೆ ಮುಂಚೆ ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ, ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ)ರ ಕಾಲದಲ್ಲಿ ಜುಮಾ ದಿನದಂದು ಮೊದಲ ಅಧಾನ್ ಇಮಾಂ ಮಿಂಬರ್‌ನಲ್ಲಿ ಕುಳಿತುಕೊಳ್ಳುವಾಗ ನೀಡಲಾಗುತ್ತಿತ್ತು. ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ಜನರು ಹೆಚ್ಚಾದಾಗ ಎರಡನೇ ಅಧಾನ್ ನೀಡುವುದನ್ನು ರೂಢಿಗೆ ತರಲಾಯಿತು. ಅದನ್ನು ಮಸೀದಿಯ ಬಾಗಿಲ ಬಳಿ ಇರುವ ಒಂದು ಕಲ್ಲಿನ ಮೇಲೆ ನಿಂತುಕೊಂಡು ನೀಡಲಾಗುತ್ತಿತ್ತು.

ಈದ್ ಹಬ್ಬದ ದಿನ ಜುಮಾ ನಮಾಝಿನ ರಿಯಾಯಿತಿ ಬಗ್ಗೆ ವರದಿಯಿದೆ. ಹಝ್ರತ್ ಉಸ್ಮಾನ್(ರ) ಈದ್ ನಮಾಝ್ ನಿರ್ವಹಿಸಿದರು. ಅಂದು ಜುಮಾ ದಿವಸವಾಗಿತ್ತು. ಹಝ್ರತ್ ಉಸ್ಮಾನ್(ರ) ಖುತ್ಬಕ್ಕೆ ಮುಂಚೆ ನಮಾಝ್ ನಿರ್ವಹಿಸಿದರು. ಅನಂತರ ಜನರನ್ನು ಸಂಬೋಧಿಸುತ್ತಾ ಹೇಳಿದರು: ಹೇ ಜನರೇ, ಈ ದಿನವು ನಿಮಗೆ ಎರಡು ಈದ್‌ಗಳು ಒಟ್ಟಿಗೆ ಬಂದಿರುವ ದಿನವಾಗಿದೆ. ಆದ್ದರಿಂದ ಮದೀನದ ಸುತ್ತಮುತ್ತ ಇರುವ ಜನರಲ್ಲಿ ಯಾರಿಗೆ ಜುಮಾ ನಿರ್ವಹಿಸುವ ಏರ್ಪಾಡು ಮಾಡಲು ಸಾಧ್ಯವೋ ಅವರು ಅದರ ಏರ್ಪಾಡು ಮಾಡಲಿ ಮತ್ತು ಯಾರು ಮರಳಿ ಹೋಗಲು ಬಯಸುತ್ತಾರೋ ಅವರಿಗೆ ಮರಳಿ ಹೋಗಲು ನಾನು ಅನುಮತಿ ಕೊಡುತ್ತೇನೆ.

(ಹುಝೂರ್ ಹೇಳಿದರು:) ಫಿಖ ಅಹ್ಮದಿಯಾದಲ್ಲಿ ಒಂದು ಸಂಗತಿ ಬರೆಯಲಾಗಿದೆ. ಅದಕ್ಕೆ ಸಂಬಂಧಿಸಿ ನನಗಂತು ಸ್ಪಷ್ಟವಾದ ಪುರಾವೆ ಇದುವರೆಗೆ ಸಿಕ್ಕಿಲ್ಲ. ಅಲ್ಲಿ ಈ ವರದಿ ನಮೂದಿಸಲಾಗಿದೆ; ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್(ರ) ಹೇಳುತ್ತಾರೆ: ಒಂದು ದಿವಸ ಎರಡು ಈದ್‌ಗಳು ಒಟ್ಟುಸೇರಿದುವು. ಅದನ್ನು ಒಂದಾಗಿಸಿ ನಿರ್ವಹಿಸಲಾಯಿತು. ಇದಕ್ಕಾಗಿ ಅವರು ಎರಡಕ್ಕೂ ಸೇರಿಸಿ ಮಧ್ಯಾಹ್ನಕ್ಕೆ ಮುಂಚಿತವಾಗಿ ಎರಡು

ರಕಅತ್‌ಗಳು ನಿರ್ವಹಿಸಿದರು. ಅದರ ನಂತರ ಅಸರಿನ ತನಕ ಯಾವುದೇ ನಮಾಝ್ ನಿರ್ವಹಿಸಲಿಲ್ಲ. ಅಂತೂ ಇದರ ಬಗ್ಗೆ ಹೆಚ್ಚಿನ ಶೋಧನೆಯ ಆವಶ್ಯಕತೆಯಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಸಹ ಹೀಗೆಯೇ ಹೇಳಿದ್ದರು. ಏಕೆಂದರೆ ಝುಹರ್ ನಮಾಝ್ ಕೂಡ ಉಪೇಕ್ಷಿಸಿದ್ದಾಗಿ ಹಝ್ರತ್ ಪೈಗಂಬರರ ಚರ್ಯೆಯಿಂದ ನೇರವಾಗಿ ಸಾಬೀತಾಗುವ ಇಂತಹ ಬೇರೆ ಯಾವುದೇ ವರದಿ ಸಿಗುತ್ತಿಲ್ಲ.

ಒಂದು ಬಾರಿ ಹಝ್ರತ್ ಉಮರ್(ರ) ಜುಮಾದ ಖುತ್ಬವನ್ನು ನೀಡುತ್ತಿದ್ದರು. ಅಷ್ಟರಲ್ಲಿ ಹಝ್ರತ್ ಉಸ್ಮಾನ್(ರ) ಪ್ರವೇಶಿಸಿದರು. ಹಝ್ರತ್ ಉಮರ್(ರ) ಕೇಳಿದರು: ಜನರಿಗೆ ಏನಾಗಿದೆ? ಅವರು ಅಧ್ಯಾನಿನ ನಂತರ ಸಹ ತಡವಾಗಿ ಬರುತ್ತಾರೆ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಹೇ ಅಮೀರುಲ್ ಮೂಅ್‌ಮಿನೀನ್, ನಾನಂತು ಅಧ್ಯಾನ್ ಕೇಳಿದೊಡನೆ ವುಝು ಮಾಡಿಕೊಂಡು ಬಂದೆನು. ಹಝ್ರತ್ ಉಮರ್(ರ) ಕೇಳಿದರು: ವುಝು ಮಾತ್ರವೇ? ನೀವು ಜುಮಾಕ್ಕಾಗಿ ಬರುವಾಗ ಸ್ನಾನ ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದನ್ನು ನೀವು ಆಲಿಸಲಿಲ್ಲವೇ?

ಹದೀಸ್‌ಗಳನ್ನು ವರದಿ ಮಾಡುವುದರಲ್ಲಿ ಹಝ್ರತ್ ಉಸ್ಮಾನ್(ರ) ಅತ್ಯಂತ ಮುನ್ನೆಚ್ಚರಿಕೆ ವಹಿಸುತ್ತಿದ್ದರು. ಆದ್ದರಿಂದ ಇತರ ಸಹಾಬರಿಗೆ ಹೋಲಿಸಿದರೆ, ಹಝ್ರತ್ ಉಸ್ಮಾನ್‌ರಿಂದ ವರದಿಯಾದ ಹದೀಸ್‌ಗಳು ಬಹಳ ಕಡಿಮೆ. ಅವರು ವರದಿ ಮಾಡಿರುವ ಒಟ್ಟು ಹದೀಸ್‌ಗಳ ಸಂಖ್ಯೆ 146 ಆಗಿವೆ. ಹಝ್ರತ್ ಉಸ್ಮಾನ್(ರ) ಹೇಳುತ್ತಾರೆ; ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಆಲಿಸಿದ್ದೇನೆ: ಯಾರು ನಾನು ಹೇಳದೇ ಇದ್ದದ್ದನ್ನು ನನಗೆ ಸಂಬಂಧಿಸಿ ಹೇಳುತ್ತಾನೋ ಅವನು ತನ್ನ ವಾಸವನ್ನು ನರಕದಲ್ಲಿ ಕಾದಿರಿಸಲಿ.

ವರದಿಗಳ ಪ್ರಕಾರ ಹಝ್ರತ್ ಉಸ್ಮಾನ್(ರ) 8 ವಿವಾಹಗಳನ್ನು ಮಾಡಿದ್ದರು. ಈ ಎಲ್ಲ ವಿವಾಹಗಳು ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಮಾಡಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಬಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಂತಹ ಸ್ವಭಾವಗುಣಗಳನ್ನು ತನ್ನೊಳಗೆ ಉಂಟುಮಾಡುವ ತನಕ ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಲಾರನು. ಇವರೆಲ್ಲರೂ ಯಥಾರ್ಥವಾಗಿ ಧರ್ಮದ ಸಂರಕ್ಷಕರಾಗಿದ್ದರು. ಅವರೆಲ್ಲರೂ ತಮ್ಮ ಜೀವಿತವನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿದ್ದರು. ಅಲ್ಲಾಹನಾಣೆ, ಅಲ್ಲಾಹನು ಶೇಖೈನ್‌ರಾದ ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಹಾಗೂ ಮೂರನೆಯದಾಗಿ ಧ್ಹುನ್ನೂರೈನ್‌ರಾದ ಹಝ್ರತ್ ಉಸ್ಮಾನ್‌ರನ್ನು ಇಸ್ಲಾಮಿನ ಬಾಗಿಲುಗಳ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ರಸೂಲುಲ್ಲಾಹ್(ಸ)ರ ಸೈನ್ಯದ ಪ್ರಮುಖರನ್ನಾಗಿ ಮಾಡಿರುವನು.

ಅನಂತರ ಶಿಯಾ ವಿಭಾಗದವರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾವು ನಿಮ್ಮ ಬೈಗುಳಗಳ ಬಗ್ಗೆ ಏನು ದೂರುಮಾಡಲಿ? ಏಕೆಂದರೆ, ನೀವು ಸಹಾಬಿಯರನ್ನು ದೂಷಿಸುತ್ತೀರಿ ಮತ್ತು ಹಝ್ರತ್ ಪೈಗಂಬರ್(ಸ)ರ ಪತ್ನಿಯಂದಿರನ್ನು ಶಾಪ ಪ್ರಾರ್ಥನೆಗಳೊಂದಿಗೆ ಸ್ಮರಿಸುತ್ತೀರಿ. ಅಲ್ಲಾಹನ ಗ್ರಂಥದಲ್ಲಿ ಅವರು ಹೆಚ್ಚು ಕಮ್ಮಿ ಮಾಡಿರುವರು ಮತ್ತದು ಅಲ್ಲಾಹನ ವಚನಗಳಲ್ಲ, ಬದಲಾಗಿ ಹಝ್ರತ್ ಉಸ್ಮಾನ್‌ರ ಹಸ್ತಪ್ರತಿಗಳೆಂದು ಭಾವಿಸುತ್ತೀರಿ. ಇಸ್ಲಾಮನ್ನು ನೀವು ಒಂದು ಒಣಭೂಮಿ ಮತ್ತು ಕೃಷಿಯಿಲ್ಲದ ಕಾಡಿನ ಹಾಗೆಂದು ನೀವು ಭಾವಿಸಿದ್ದೀರಿ. ಸಂಶೋಧನೆ ಮೂಲಕ ಅಲ್ಲಾಹನು ನನಗೆ ಖಿಲಾಫತ್ ಬಗ್ಗೆ ತಿಳಿಸಿಕೊಟ್ಟಿದ್ದಾನೆ. ಹಝ್ರತ್ ಅಬೂಬಕರ್ ಸಿದ್ದೀಖ್, ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್(ರ) ಸಾತ್ವಿಕರು, ಸತ್ಯವಿಶ್ವಾಸಿಗಳು ಮತ್ತು ಅಲ್ಲಾಹನು ಆಯ್ಕೆ ಮಾಡಿದ್ದ ವ್ಯಕ್ತಿಗಳಲ್ಲಿ ಸೇರಿದವರು ಎಂದು ಅಲ್ಲಾಹನು ನನಗೆ ಸ್ಪಷ್ಟವಾಗಿ ಅರುಹಿದ್ದಾನೆ.

(ಹುಝೂರ್ ಹೇಳಿದರು:) ಇದರೊಂದಿಗೆ ಹಝ್ರತ್ ಉಸ್ಮಾನ್(ರ)ರ ಪ್ರಸ್ತಾಪ ಕೊನೆಗೊಳ್ಳುತ್ತದೆ. ಇನ್ನು ಮುಂದೆ ಹಝ್ರತ್ ಉಮರ್(ರ)ರ ಪ್ರಸ್ತಾಪ ಶುರುವಾಗುವುದು – ಇನ್‌ಶಾ ಅಲ್ಲಾಹ್.

(ಅನಂತರ ಹುಝೂರ್ ಅಲ್‌ಇಸ್ಲಾಂ ವೆಬ್‌ಸೈಟ್‌ನ ಟೀಂ ತಯಾರಿಸಿದ ಪವಿತ್ರ ಖುರ್‌ಆನ್ ಸರ್ಚಿನ ಒಂದು ಹೊಸ ವೆಬ್‌ಸೈಟ್‌ನ ಮೊದಲ ವರ್ಶನ್ ಶುರುಮಾಡಲಾದ ಬಗ್ಗೆ ಘೋಷಿಸಿದರು.) ಈ ವೆಬ್‌ಸೈಟನ್ನು ಅಲ್‌ಇಸ್ಲಾಂ ವೆಬ್‌ಸೈಟಿಗೆ ಹೋಗದೇ ಕೂಡ ನೋಡಬಹುದಾಗಿದೆ. ಯಾವುದೇ ಸೂರತ್, ಆಯತ್, ಪದ ಅಥವಾ ವಿಷಯವನ್ನು ಅರಬೀ, ಇಂಗ್ಲಿಷ್ ಅಥವಾ ಉರ್ದುವಿನಲ್ಲಿ ಒಂದು ಹೊಸ ಸರ್ಚ್ ಇಂಜಿನ್ ಮೂಲಕ ಕಂಡುಹಿಡಿಯಬಹುದಾಗಿದೆ. ಇದಲ್ಲದೇ ಅಲ್‌ಇಸ್ಲಾಂ ವೆಬ್‌ಸೈಟಿನಲ್ಲಿ ಪವಿತ್ರ ಖುರ್‌ಆನ್ ಓದಲು, ಆಲಿಸಲು ಮತ್ತು ಸರ್ಚ್ ಮಾಡಲು ಮನೋಹರವಾದ ವರ್ಶನ್ ಆದ readquran.app ನ್ನು ಸಹ ತಯಾರು ಮಾಡಲಾಗಿದೆ. ಈ ಪ್ರೊಜೆಕ್ಟ್ ಪವಿತ್ರ ಖುರ್‌ಆನಿನ ಸುಂದರವಾದ ಪಾಠಗಳನ್ನು ಲೋಕದಲ್ಲಿ ಹರಡಲು ಕಾರಣವಾಗಲಿ, ಜಮಾಅತಿನವರು ಸಹ ಇದರಿಂದ ಪೂರ್ಣವಾದ ಪ್ರಯೋಜನವನ್ನು ಪಡೆಯುವಂತಾಗಲಿ ಎಂದು ಅಲ್ಲಾಹನಲ್ಲಿ ದುಆ ಮಾಡುತ್ತೇನೆ.

(ಅನಂತರ ಹಝ್ರತ್ ಖಲೀಫತುಲ್ ಮಸೀಹರು ಪಾಕಿಸ್ತಾನದ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಮತ್ತೊಮ್ಮೆ ವಿನಂತಿಸಿದರು. ನಂತರ ಹುಝೂರ್ ಇತ್ತೀಚೆಗೆ ನಿಧನರಾದ ಸನ್ಮಾನ್ಯ ದರ್ಗಾರಾಂಪೂರಿಯ ಮುಹಮ್ಮದ್ ಸಾದಿಖ್ ಸಾಹಿಬ್. ದಾರುಲ್ ಅಮಾನ್ ರಬ್ವದ ರಶೀದ್ ಅಹ್ಮದ್ ಅಠ್‌ವಾಲ್‌ರ ಪತ್ನಿಯಾದ ಸನ್ಮಾನ್ಯ ಮುಖ್ತಾರಾನ್ ಬೀಬಿ ಸಾಹಿಬ, ಸನ್ಮಾನ್ಯ ಮಂಝೂರ್ ಅಹ್ಮದ್ ಶಾದ್ ಸಾಹಿಬ್, ಯು.ಎಸ್.ಎ.ಯ ಅಬ್ದುರ್ರಹ್ಮಾನ್ ಸಲೀಂ ಸಾಹಿಬ್‌ರ ಪತ್ನಿಯಾದ ಹಮೀದ ಅಖ್ತರ್ ಸಾಹಿಬ, ಜರ್ಮನಿಯ ಸನ್ಮಾನ್ಯ ನಾಸಿರ್ ಪೀಟರ್ ಲೋಟಸೀನ್ ಸಾಹಿಬ್, ಕೆನಡದ ರಝಿಯ ತನ್ವೀರ್ ಸಾಹಿಬ, ಸರ್ಗೋಧದ ಸನ್ಮಾನ್ಯ ಮಂಝೂರ್ ಅಹ್ಮದ್ ಗ್ಹಾಲಿಬ್ ಸಾಹಿಬ್, ಸನ್ಮಾನ್ಯ ಬುಶ್ರಾ

ಹಮೀದ್ ಅನ್ವರ್ ಅದನೀ ಸಾಹಿಬ, ಸನ್ಮಾನ್ಯ ನೂರುಸ್ಸಬಾ ಝುಫರ್ ಸಾಹಿಬ, ಸನ್ಮಾನ್ಯ ಸುಲ್ತಾನ್ ಅಲಿ ರೈಹಾನ್ ಸಾಹಿಬ್, ಸನ್ಮಾನ್ಯ ಖಾಲಿದ್ ಸಅದುಲ್ಲಾಹ್ ಮಿಸ್ರೀ ಅರ್‌ದನ್ ಸಾಹಿಬ್, ರಬ್ವದ ಸನ್ಮಾನ್ಯ ಮುಹಮ್ಮದ್ ಮುನೀರ್ ಸಾಹಿಬ್, ರಬ್ವದ ಮಾಸ್ಟರ್ ನದೀರ್ ಅಹ್ಮದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು.)

(ಹಝ್ರತ್ ಖಲೀಫತುಲ್ ಮಸೀಹರು ಜಮ್ಮು ಕಾಶ್ಮೀರದ ರಾಜೋರಿ ಜಿಲ್ಲೆಯ ಕಾಲಾಬನ್‌ನ ಮುಬಲ್ಲಿಗ್ ಆದ ಮೌಲವಿ ಗುಲಾಂ ಖಾದಿರ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು:) ಅವರು ಮಾರ್ಚ್ 26ರಂದು 56ನೇ ವಯಸ್ಸಿನಲ್ಲಿ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ದಿವಂಗತರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರಾದ ಸನ್ಮಾನ್ಯ ಬಹಾದೂರ್ ಅಲಿ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಆ ಕುಟುಂಬದ ಹದಿಮೂರು ವ್ಯಕ್ತಿಗಳು ಅಲ್ಲಾಹನ ಅನುಗ್ರಹದಿಂದ ಈಗ ಜಮಾಅತಿನ ಸೇವೆಯಲ್ಲಿ ನಿರತರಾಗಿರುವರು. ದಿವಂಗತರಿಗೆ 36 ವರ್ಷ ಆರು ತಿಂಗಳುಗಳ ಕಾಲ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ದಿವಂಗತರ ಪೋಸ್ಟಿಂಗ್ ಎಲ್ಲಿ ಆದಾಗಲೂ ಬಹಳ ಸಂತೋಷದಿಂದ ಮತ್ತು ಸಂಪೂರ್ಣವಾದ ಪರಿಶ್ರಮದೊಂದಿಗೆ ಶಿಕ್ಷಣ ಮತ್ತು ನೈತಿಕ ತರಬೇತಿಯ ಜವಾಬ್ದಾರಿಯನ್ನು ಕೊನೆಯ ತನಕ ನಿರ್ವಹಿಸುತ್ತಿದ್ದರು. ತಬ್ಲೀಗ್ ಮಾಡಲು ನಿಪುಣರಾಗಿದ್ದರು. ತಬ್ಲೀಗ್ ಮೈದಾನದಲ್ಲಿ ಬರುವ ಕಷ್ಟತೆಗಳು ಮತ್ತು ವಿರೋಧಗಳನ್ನು ಕೆಚ್ಚೆದೆಯಿಂದ ಎದುರಿಸುತ್ತಿದ್ದರು. ಅತ್ಯಂತ ಸಹನೆಯುಳ್ಳ, ಇದ್ದುದ್ದರಲ್ಲಿ ತೃಪ್ತಿ ಹೊಂದಿದ್ದ ಧೀರ ಮುಬಲ್ಲಿಗ್‌ರಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಒಬ್ಬ ಮಗನಾದ ಬಶೀರುದ್ದೀನ್ ಖಾದಿರ್ ಸಾಹಿಬ್ ಜಾಮಿಅ ಅಹ್ಮದಿಯಾ ಖಾದಿಯಾನಿನಲ್ಲಿ ಕೊನೆಯ ಕ್ಲಾಸಿನಲ್ಲಿ ಕಲಿಯುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

(ಖಾದಿಯಾನಿನ ದರ್ವೇಶ್ ಆದ ಮುಹಮ್ಮದ್ ಆರಿಫ್ ಸಾದಿಖ್ ಸಾಹಿಬ್‌ರ ಪತ್ನಿಯಾದ ಮಹ್ಮೂದ ಬೇಗಂ ಸಾಹಿಬರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಅವರು 85ನೇ ವಯಸ್ಸಿನಲ್ಲಿ ಹೃದಯಾಘಾತ ನಿಮಿತ್ತ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ದಿವಂಗತರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯಾದ ಹಝ್ರತ್ ಅಶ್ರಫ್ ಅಲಿ ಸಾಹಿಬರ ಮೊಮ್ಮಗಳು ಹಾಗೂ ಖಾಝಿ ಶಾದ್ ಬಖ್ಷ್ ಸಾಹಿಬ್‌ರ ಮಗಳಾಗಿದ್ದರು. ಅವರ ವಿವಾಹ ದಿವಂಗತ ದರ್ವೇಶ್ ಮುಹಮ್ಮದ್ ಆರಿಫ್ ಸಾದಿಖ್‌ರೊಂದಿಗೆ ನಡೆದಿತ್ತು. ದಿವಂಗತರು ದರ್ವೇಶೀ ಕಾಲವನ್ನು ತನ್ನ ಕುಟುಂಬದೊಂದಿಗೆ ಅತ್ಯಂತ ಸಹನೆ ಮತ್ತು ಕೃತಜ್ಞತೆಯಿಂದ ಕಳೆದಿದ್ದರು. ನಮಾಝಿನ ಪಾಲನೆ ಮತ್ತು ಪವಿತ್ರ ಖುರ್‌ಆನಿನ ಪಾರಾಯಣ ಕರಾರುವಕ್ಕಾಗಿ ಮಾಡುತ್ತಿದ್ದರು. ಚಂದಾ ಪಾವತಿಯಲ್ಲೂ ಬಹಳ ಕರಾರುವಕ್ಕಾಗಿದ್ದರು. ಖಿಲಾಫತ್‌ನೊಂದಿಗೆ ಅತ್ಯಂತ ಉತ್ತಮ ಸಂಬಂಧವನ್ನು ಇರಿಸುತ್ತಿದ್ದರು. ಮಕ್ಕಳೊಂದಿಗೂ ಈ ಸಂಬಂಧವಾಗಿ ಉಪದೇಶಿಸುತ್ತಿದ್ದರು. ದಿವಂಗತರು ವಸಿಯ್ಯತ್ ಮಾಡಿದ್ದರು. ದಿವಂಗತರು ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. (ಜುಮಾ ನಮಾಝಿನ ನಂತರ ಇವರೆಲ್ಲರ ಜನಾಝ಼ ಗಾಇಬ್ ನಮಾಝ್ ನಿರ್ವಹಿಸುವುದಾಗಿ ಹುಝೂರ್ ಹೇಳಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 09-04-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon